**ದಿನಾಂಕಃ 15-09-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ.ವಕೀಲರಿಂದಃ**

ದಿಃ 06-07-2023 ರಂದು ನಾನು ನ್ಯಾಯಾಲಯದಲ್ಲಿ ನನ್ನ ಸಾಕ್ಷಿ ವಿಚಾರಣೆಯನ್ನು ನುಡಿದಿದ್ದೇನೆ ಎಂದರೆ ಸರಿ. ಸದರಿ ದಿನದಂದು ನಾನು ರಾಜು.ಎಸ್.ಆರ್.ರವರು ಅಂಗವಿಕಲ ವೇತನವನ್ನು ಪಡೆಯುತ್ತಿದ್ದರು ಹಾಗು ಸದರಿಯವರ ಮರಣಾನಂತರ ಸದರಿ ಅಂಗವಿಕಲ ವೇತನವನ್ನು ನಮ್ಮ ಕಚೇರಿಯಿಂದ ನಿಲ್ಲಿಸಲಾಗಿರುತ್ತದೆ ಎಂದು ನುಡಿದಿದ್ದೇನೆ ಆದರೆ ನಮ್ಮ ಕಚೇರಿಯ ಕಡತಗಳಲ್ಲಿ ಆ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ಸದರಿ ರಾಜು.ಎಸ್.ಆರ್ ರವರು ನಮ್ಮ ಕಚೇರಿಯಿಂದ ಅಂಗವಿಕಲ ವೇತನವನ್ನು ಪಡೆದುಕೊಳ್ಳುತ್ತಿದ್ದರು ಆದರೆ ಆ ಬಗ್ಗೆ ನಮ್ಮ ಕಚೇರಿಯಲ್ಲಿ ಯಾವುದೇ ಕಡತ ಇರುವುದಿಲ್ಲ ಎನ್ನುವ ಬಗ್ಗೆ ನಿ.ಆರ್-9 ರ ಅಲಭ್ಯ ಪ್ರಮಾಣ ಪತ್ರವನ್ನು ನಾನು ಹಾಜರು ಪಡಿಸಿದ್ದೇನೆ ಎನ್ನುವುದನ್ನು

ದಿಃ 14-07-2023 ರಂದು ಅರ್ಜಿದಾರರ ಪರ ವಕೀಲರು ನನ್ನನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ನಾನು ಒಪ್ಪಿಕೊಂಡಿದ್ದೇನೆ ಎಂದರೆ ಸರಿ.

ಸದರಿ ಅರ್ಜಿದಾರರ ಪರ ವಕೀಲರು ನನ್ನನ್ನು ಪಾಟೀ ಸವಾಲು ಮಾಡುವ ಸಮಯದಲ್ಲಿ ಸದರಿ ಮೃತ ರಾಜು.ಎಸ್.ಆರ್ ರವರಿಗೆ ಸಂಬಂಧಪಟ್ಟ ಕಡತ ಕಚೇರಿಯಲ್ಲಿ ಲಭ್ಯವಾಗಿ ಇಲ್ಲದೇ ಇದ್ದರೂ ಸಹ ಯಾವ ಆಧಾರದ ಮೇರೆಗೆ ಸದರಿ ಮಾಹಿತಿಯನ್ನು ನಿ.ಆರ್-9 ರಲ್ಲಿ ನಮೂದಿಸಿದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ತನಗೆ ನ್ಯಾಯಾಲಯ ಕಾಲಾವಕಾಶ ನೀಡಿದರೆ ಸದರಿ ದಾಖಲೆಯನ್ನು ಹುಡುಕಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರು ಮಾಡುತ್ತೇನೆ ಎಂದು ನಾನು ಸದರಿ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ದಿಃ 18-08-2023 ರಂದು ಸದರಿ ಅರ್ಜಿದಾರರ ಪರ ವಕೀಲರು ನನ್ನ ಮುಂದುವರೆದ ಪಾಟೀ ಸವಾಲಿನ ಸಮಯದಲ್ಲಿ ಸದರಿ ರಾಜು.ಎಸ್.ಆರ್ ಬಿನ್ ರಾಮಚಂದ್ರಪ್ಪ ರವರು ನಮ್ಮ ಕಚೇರಿಯಿಂದ

ಮಾಸಿಕ ಅಂಗವಿಕಲ ಮಾಶಾಸನವನ್ನು ಪಡೆದುಕೊಳ್ಳುತ್ತಿರಲಿಲ್ಲ ಎಂದು ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ. ದಿಃ 14–07–2023 ರಂದು ನ್ಯಾಯಾಲಯದಲ್ಲಿ ನಾನು ನುಡಿದ ನನ್ನ ಸಾಕ್ಷಿ ವಿಚಾರಣೆಯಲ್ಲಿ ಸದರಿ ಮೃತ ರಾಜು.ಎಸ್.ಆರ್ ರವರಿಗೆ ನಮ್ಮ ಕಚೇರಿಯಿಂದ ಮಾಸಿಕ ಅಂಗವಿಕಲ ಮಾಶಾಸನವನ್ನು ನೀಡಲಾಗುತ್ತಿತ್ತು ಎಂದು ನುಡಿದಿದ್ದೇನೆ ಅದೇ ರೀತಿ ದಿಃ 18–08–2023 ರಂದು ನಾನು ನ್ಯಾಯಾಲಯದಲ್ಲಿ ನುಡಿದ ನನ್ನ ಸಾಕ್ಷಿ ವಿಚಾರಣೆಯಲ್ಲಿ ಸದರಿ ಮೃತ ರಾಜು.ಎಸ್.ಆರ್ ರವರಿಗೆ ನಮ್ಮ ಕಚೇರಿಯಿಂದ ಮಾಸಿಕ ಅಂಗವಿಕಲ ಮಾಶಾಸನವನ್ನು ನೀಡಲಾಗುತ್ತಿರಲಿಲ್ಲ ಎಂದು ನುಡಿದಿದ್ದೇನೆ ಸದರಿ ನನ್ನ ಎರಡೂ ಹೇಳಿಕೆಗಳ ಪೈಕಿಯ ಯಾವ ಹೇಳಿಕೆ ಸರಿಯಾಗಿ ಇದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ದಿಃ 18–08–2023 ರಂದು ತಾನು ತನ್ನ ಸಾಕ್ಷಿ ವಿಚಾರಣೆಯಲ್ಲಿ ನುಡಿದಿರುವ ಹೇಳಿಕೆ ಅಂದರೆ ಸದರಿ ಮೃತ ರಾಜು.ಎಸ್.ಆರ್ ರವರಿಗೆ ನಮ್ಮ ಕಚೇರಿಯಿಂದ ಯಾವ ಮಾಸಿಕ ಅಂಗವಿಕಲ ಮಾಶಾಸನ ನೀಡಲಾಗುತ್ತಿರಲಿಲ್ಲ ಎನ್ನುವ ನನ್ನ ಸಾಕ್ಷಿ ವಿಚಾರಣೆ ಸರಿಯಾಗಿರುತ್ತದೆ. ದಿಃ 18–08–2023 ಕ್ಕಿಂತ ಪೂರ್ವದಲ್ಲಿ

ನಾನು ನ್ಯಾಯಾಲಯದಲ್ಲಿ ನುಡಿದಿರುವ ನನ್ನ ಸಾಕ್ಷಿ ವಿಚಾರಣೆ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ನಿ.ಆರ್-9(ಸದರಿ ಮೃತ ರಾಜು.ಎಸ್.ಆರ್ ರವರ ಮರಣದ ನಂತರ ಅಂಗವಿಕಲ ವೇತನವನ್ನು ರದ್ದು ಮಾಡಿರುವ ಬಗ್ಗೆ ಇರುವ ದಾಖಲೆ) ರ ದಾಖಲೆಯು ಸಹ ನಿಜವಾದ ದಾಖಲೆಯಾಗಿರುತ್ತದೆ . ದಿಃ 02-08-2023 ರಂದು ನಾನು ನ್ಯಾಯಾಲಯಕ್ಕೆ ನನ್ನ ಒಂದು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಸದರಿ ಪ್ರಮಾಣ ಪತ್ರದಲ್ಲಿ ಸದರಿ ಮೃತ ರಾಜು.ಎಸ್.ಆರ್ ರವರು ಹಿಂದೆ ಅಂಗವಿಕಲ ಪಿಂಚಣಿ ಪಡೆಯುತ್ತಿದ್ದರು ನಂತರ ಸದರಿಯವರ ಮರಣದ ನಂತರ ಸದರಿ ಪಿಂಚಣಿಯನ್ನು ಸ್ಥಗಿತಗೊಳಿಸಲಾಗಿರುತ್ತದೆ ಎಂದು ವಿವರಣೆಯನ್ನು ನೀಡಿದ್ದೇನೆ ಎಂದರೆ ಸರಿ. ಸದರಿ ದಿಃ 02-08-2023 ರಂದು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಪ್ರಮಾಣ ಪತ್ರ ನಿಜವಾಗಿರುತ್ತದೆ .

ಸಾಕ್ಷಿಗೆ ದಾವಣಗೆರೆ ತಾಲ್ಲೂಕಿನ ತಹಶೀಲ್ದಾರ ರವರು ದಿಃ 15-10-2011 ರಂದು ಪಿ.ಹೆಚ್ ಪಿ/ಸಿ.ಆರ್/69/10-11 ರಂದು ಅಧಿಕೃತ ಜ್ಞಾಪನಾ ಪತ್ರ / ವಿಷಯ ಶೇ.75 ಹಾಗು ಹೆಚ್ಚಿನ ಅಂಗವಿಕಲತೆ

ಹೊಂದಿರುವ ವ್ಯಕ್ತಿಗಳಿಗೆ ಮಾಹೆಯಾನ ರೂ.1,000/- ಮಾಶಸನ ನೀಡುವ ಬಗ್ಗೆ ಎಂದು ಬರೆದಿರುವ ದಾಖಲೆಯಲ್ಲಿರುವ ಮೃತ ರಾಜು.ಎಸ್.ಆರ್ ರವರ ಭಾವಚಿತ್ರಕ್ಕೆ ತಹಶೀಲ್ದಾರ ದಾವಣಗೆರೆ ಕಚೇರಿಯ Seal ನ್ನು ಹಾಕಿರುವ ಸದರಿ ದಾಖಲೆಯನ್ನು ತೋರಿಸಿ ಸದರಿ ದಾಖಲೆ ನಿಮ್ಮ ಕಚೇರಿಯಿಂದ ನೀಡಲಾಗಿರುವ (ಝುರಾಕ್ಸ ಪ್ರತಿ) ದಾಖಲೆಯಾಗಿರುತ್ತದೆಯಾ ಎಂದು ಕೇಳಿದ ಪ್ರಶ್ನೆಗೆ (ಅರ್ಜಿದಾರರ ಪರ ವಕೀಲರಾದ ಶ್ರೀ.ಎಂ.ಎಸ್.ಬಿ ವಕೀಲರು ಸದರಿ ತಕರಾರನ್ನು ಅಥವಾ ಆಕ್ಷೇಪಣೆಯನ್ನು ಎತ್ತಿರುತ್ತಾರೆ) ಸದರಿ ಪ್ರಶ್ನೆಗೆ ಸಾಕ್ಷಿ ಸದರಿ ದಾಖಲೆ ನಮ್ಮ ಕಚೇರಿಗೆ ಸಂಬಂಧಪಟ್ಟಿರುವ ದಾಖಲೆಯಾಗಿರುವುದಿಲ್ಲ ಎಂದು ನುಡಿಯುತ್ತಾರೆ . ಸಾಕ್ಷಿಗೆ ಸದರಿ ದಾವಣಗೆರೆ ತಾಲ್ಲೂಕಿನ ತಹಶೀಲ್ದಾರ ರವರು ದಿಃ 15-10-2011 ರಂದು ಪಿ.ಹೆಚ್ ಪಿ/ಸಿ.ಆರ್/69/10-11 ರಂದು ಅಧಿಕೃತ ಜ್ಞಾಪನಾ ಪತ್ರ / ವಿಷಯ ಶೇ.75 ಹಾಗು ಹೆಚ್ಚಿನ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳಿಗೆ ಮಾಹೆಯಾನ ರೂ.1,000/- ಮಾಶಸನ ನೀಡುವ ಬಗ್ಗೆ ಇರುವ ದಾಖಲೆಯ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ

ನ್ಯಾಯಾಲಯಕ್ಕೆ ಸಾಕ್ಷಿ ನುಡಿಯುವಂತೆ ನ್ಯಾಯಾಲಯ ನಿರ್ದೇಶನ ನೀಡಿತ್ತು ಎಂದರೆ ಸರಿ. ಸಾಮಾನ್ಯವಾಗಿ ತಹಶೀಲ್ದಾರ ಕಚೇರಿಯಿಂದ ಯಾವುದೇ ಒಬ್ಬ ಅಂಕವಿಕಲ ಅಥವಾ ವಿಕಲಚೇತನ ವ್ಯಕ್ತಿಗೆ ಶೇ.75 ಕ್ಕಿಂತ ಹೆಚ್ಚು ಅಂಗವಿಕಲತೆ ಇದ್ದಲ್ಲಿ ಸದರಿ ವ್ಯಕ್ತಿಯು ಜಿಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಪರೀಕ್ಷೆಗೆ ಒಳಪಟ್ಟು ಸದರಿ ವಿಕಲಚೇತನ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದಲ್ಲಿ ಮಾತ್ರ ಅಂತಹ ವ್ಯಕ್ತಿಗೆ ತಹಶೀಲ್ದಾರ ಕಚೇರಿಯಿಂದ ಮಾಸಿಕ ಅಂಗವಿಕಲ ಮಾಶಾಸನವನ್ನು ಪಡೆಯಲು ಅರ್ಹರು ಇರುತ್ತಾರೆ ಎಂದರೆ ಸರಿ. ಸದರಿ ಅಂಗವಿಕಲ (ವಿಕಲಚೇತನ) ಮಾಶಾಸನವನ್ನು ಪಡೆಯಲು ಬಯಸುವ ವ್ಯಕ್ತಿ ಸದರಿ ಅರ್ಜಿಯನ್ನು ವಿಕಲಚೇತನ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆಯಿಂದ Recommendation ಪಡೆದುಕೊಂಡು ಬಂದಲ್ಲಿ ಮಾತ್ರ ಅಂತಹ ವ್ಯಕ್ತಿಗಳಿಗೆ ನಮ್ಮ ಕಚೇರಿಯಿಂದ ಮಾಸಿಕ ವಿಕಲಚೇತನ ಮಾಶಾಸನವನ್ನು ನೀಡಲಾಗುತ್ತದೆ ಎಂದರೆ ಸರಿ. ತಹಶೀಲ್ದಾರ ಕಚೇರಿಯಿಂದ ವಿಕಲಚೇತನ ಮಾಶಾಸನವನ್ನು ಮಂಜೂರು ಮಾಡಿದ ಆದೇಶದ ಪ್ರತಿ 1) ಸದರಿ ವಿಕಲಚೇತನ ವ್ಯಕ್ತಿಗೆ , 2) ಜಿಲ್ಲಾ ಖಜಾನೆ ಅಧಿಕಾರಿಗೆ , 3)

ಜಿಲ್ಲಾಧಿಕಾರಿ ಮತ್ತು 4) ಉಪವಿಭಾಗಾಧಿಕಾರಿಗೆ ಸಲ್ಲಿಸಲಾಗುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕೇವಲ ಜಿಲ್ಲಾ ಖಜಾನಾಧಿಕಾರಿಗೆ ಮಾತ್ರ ಹೋಗುತ್ತದೆ ಎಂದು ನುಡಿಯುತ್ತಾರೆ . ಮಧ್ಯಂತರ ಅರ್ಜಿ ಸಂಖ್ಯೆ.09 ರಲ್ಲಿ ದಾವಣಗೆರೆಯ ತಹಶೀಲ್ದಾರರವರಿಗೆ " Pension order No.PH P CR/69/10-11 dated 15-10-2010 issued by The Tahasildar, Davanagere to the deceased Raju.S.R. S/o Ramachandrappa " ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿ ಸಾಕ್ಷಿ ನುಡಿಯುವಂತೆ ಆದೇಶ ಆಗಿತ್ತು ಎಂದರೆ ಸರಿ. ಈಗಾಗಲೇ ಪಾಟೀ ಸವಾಲಿನಲ್ಲಿ ದಾಖಲೆ ತೋರಿಸಿ ಕೇಳಿದ ಪ್ರಶ್ನೆ ಮತ್ತು ಮಧ್ಯಂತರ ಅರ್ಜಿ ಸಂಖ್ಯೆ .09 ರಲ್ಲಿ ನಮೂದಿಸಿರುವ ವಿಷಯಗಳು ಒಂದೇ ಆಗಿರುತ್ತವೆ ಎಂದರೆ ಸರಿ . ಸದರಿ ಮಧ್ಯಂತರ ಅರ್ಜಿ ಸಂಖ್ಯೆ .09 ರ ಆದೇಶದ ಮೇರೆಗೆ ನಾನು ನ್ಯಾಯಾಲಯಕ್ಕೆ ಪ್ರಥಮ ಬಾರಿಗೆ ಹಾಜರಾಗಿ ಸಾಕ್ಷಿ ನುಡಿದಾಗ ಸದರಿ ರಾಜು.ಎಸ್.ಆರ್ ರವರಿಗೆ ಸದರಿಯವರ ಜೀವಿತಾವಧಿಯಲ್ಲಿ ಸದರಿ ವ್ಯಕ್ತಿಗೆ ನಮ್ಮ ಕಚೇರಿಯಿಂದ ಮಾಸಿಕ

ವಿಕಲಚೇತನ ಮಾಶಾಸನವನ್ನು ನೀಡುತ್ತಿದ್ದೇವು ಸದರಿಯವರ ಮರಣಾನಂತರ ಅದನ್ನು ಸ್ಥಗಿತ ಮಾಡಿರುತ್ತೇವೆ ಎಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ.

Karnataka Disability Scheme, State Disability Pension ನ ಪ್ರಕಾರ ಸದರಿ ವ್ಯಕ್ತಿ ಹಳ್ಳಿಯಲ್ಲಿ ವಾಸವಾಗಿದ್ದರೆ ಸದರಿ ವ್ಯಕ್ತಿಯ ಕುಟುಂಬದ ವಾರ್ಷಿಕ ಆದಾಯ ರೂ.11,500/- ಆಗಿದ್ದರೆ ಅಥವಾ ಸದರಿ ವ್ಯಕ್ತಿ ಪಟ್ಟಣದಲ್ಲಿ ವಾಸವಾಗಿದ್ದರೆ ಸದರಿ ವ್ಯಕ್ತಿಯ ಕುಟುಂಬದ ವಾರ್ಷಿಕ ಆದಾಯ ರೂ.24,000/- ಆಗಿದ್ದರೆ ಮತ್ತು ಸದರಿ ವ್ಯಕ್ತಿ 10 ವರ್ಷಗಳಿಗಿಂತ ಹೆಚ್ಚಿನ ಸಮಯದವರೆಗೆ ಕರ್ನಾಟಕದಲ್ಲಿಯೇ ವಾಸವಾಗಿದ್ದರೆ ಮಾತ್ರ ಅಂತಹ ವ್ಯಕ್ತಿಗಳು ಮಾತ್ರ ಮಾಸಿಕ ವಿಕಲಚೇತನ ಮಾಶಾಸನವನ್ನು ಪಡೆಯಲು ಅರ್ಹರು ಆಗಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ತನ್ನ ಇಲಾಖೆಗೆ ಸಂಬಂಧಪಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ . ಸದರಿ ಅಭ್ಯರ್ಥಿಯು ನಮ್ಮ ಕಚೇರಿಗೆ ತನ್ನ ವಾರ್ಷಿಕ ಆದಾಯದ ಪ್ರಮಾಣಪತ್ರ, ವಾಸ ಸ್ಥಳದ ಗುರುತಿನ ಪತ್ರ , ಅಂಗನ್ಯೂನ್ಯತೆ ಪ್ರಮಾಣಪತ್ರ ಮತ್ತು

ಮೂರು ಪಾಸ್ ಪೋರ್ಟ್ ಸೈಜಿನ ಪೋಟೋಗಳನ್ನು ಅರ್ಜಿಯೊಂದಿಗೆ ಸಲ್ಲಿಸಬೇಕಾಗುತ್ತದೆ ಎಂದರೆ ಸರಿ. ದಿಃ07-03-2023 ರ ಅವಧಿಯಲ್ಲಿ ಒಬ್ಬ ವಿಕಲಚೇತನ ವ್ಯಕ್ತಿಗೆ ಶೇ.75 ಕ್ಕಿಂತ ಕಡಿಮೆ ಅಂಗನ್ಯೂನ್ಯತೆ ಇದ್ದಲ್ಲಿ ಅಂತಹ ವ್ಯಕ್ತಿ ಕೇವಲ ನಾಲ್ಕು ನೂರು ರೂಪಾಯಿ ಮಾಸಿಕ ವಿಕಲಚೇತನ ಮಾಶಾಸನವನ್ನು ಪಡೆಯಲು ಅರ್ಹರು ಇರುತ್ತಾರೆ ಎಂದರೆ ಸರಿ.

ದಿಃ 07-03-2023 ರ ಅವಧಿಯಲ್ಲಿ ಒಬ್ಬ ವಿಕಲಚೇತನ ವ್ಯಕ್ತಿಗೆ ಶೇ.75 ಕ್ಕಿಂತ ಹೆಚ್ಚು ಅಂಗನ್ಯೂನ್ಯತೆ ಇದ್ದಲ್ಲಿ ಅಂತಹ ವ್ಯಕ್ತಿ ಕೇವಲ ಎಂಟು ನೂರು ರೂಪಾಯಿ ಮಾಸಿಕ ವಿಕಲಚೇತನ ಮಾಶಾಸನವನ್ನು ಪಡೆಯಲು ಅರ್ಹರು ಇರುತ್ತಾರೆ ಎಂದರೆ ಸರಿ.

ಅರ್ಜಿದಾರರಿಗೆ ಅನುಕೂಲವಾಗಲಿ ಎಂದು ಹೇಳಿ ನಾನು ಪ್ರಪ್ರಥಮ ಬಾರಿಗೆ ನಾನು ನನ್ನ ಸಾಕ್ಷಿಯನ್ನು ನುಡಿಯಲು ಬಂದಾಗ ನಾನು ನ್ಯಾಯಾಲಯಕ್ಕೆ ಸತ್ಯ-ಸಂಗತಿಯನ್ನೇ ನುಡಿದಿದ್ದೇನೆ ಆದರೆ ಅರ್ಜಿದಾರರ ಪರ ವಕೀಲರು ನನ್ನನ್ನು ಪಾಟೀ ಸವಾಲು ಮಾಡಿದಾಗ

ನಾನು ಪ್ರತಿಕೂಲ ಸಾಕ್ಷಿಯೆಂದು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರು ಪಾಟೀ ಸವಾಲುಃ ಅರ್ಜಿದಾರರಪರ ಶ್ರೀ ಎಂ.ಎಸ್.ಬಿ.ವಕೀಲರಿಂದಃ**

ವಿಕಲಚೇತನ ವ್ಯಕ್ತಿಗಳನ್ನು ಸಮಾಜದ ಮುಖ್ಯ ವಾಹಿನಿಗೆ ತರಬೇಕು ಎನ್ನುವ ಉದ್ದೇಶದಿಂದ ಅಂಗವಿಕಲ ವ್ಯಕ್ತಿಗಳ ಅಧಿನಿಯಮ–1995 ರ ಪ್ರಕಾರ ಕೇಂದ್ರ ಸರ್ಕಾರದ Indiragandhi National Social Security Scheme ನ್ನು ರಾಜ್ಯ ಸರ್ಕಾರದ ಸಂಯೋಗದೊಂದಿಗೆ ಜಾರಿಗೊಳಿಸಲಾಗಿರುವ ಅಧಿನಿಯಮವಾಗಿರುತ್ತದೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ . ಸದರಿ ಅಧಿನಿಯಮದ ಪ್ರಕಾರ ಅಂಗವಿಕಲ ವ್ಯಕ್ತಿಗಳಿಗೆ ನೌಕರಿ, ಸ್ವಂತ ಉದ್ಯೋಗಗಳ ಮುಖಾಂತರ ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶವನ್ನು ಹೊಂದಿರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಿಕಲಚೇತನ ಮಿಸಲಾತಿಯಲ್ಲಿಯೇ ನಾನು ಉದ್ಯೋಗವನ್ನು ಪಡೆದು ಕೊಂಡಿದ್ದೇನೆ ಎಂದರೆ ಸರಿ. ವಿಕಲಚೇತನ ಹೊಂದಿದ ವ್ಯಕ್ತಿ ಸ್ವಂತ–ಉದ್ಯೋಗದಿಂದ ಸಂಪಾದನೆ ಮಾಡಬಹುದು ಎಂದರೆ ಸರಿ. ಸದರಿ ವಿಕಲಚೇತನ ವ್ಯಕ್ತಿ ತನ್ನ ಸಂಪಾದನೆಯಿಂದ ತನ್ನ

ಕುಟುಂಬವನ್ನು ಪಾಲನೆ-ಪೋಷಣೆ ಮಾಡಬಹುದು ಎಂದರೆ ಸರಿ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.